# ಹೀಗೊಂದು ಮದುವೆ




ಪ್ರಸಕ್ತ ದಿನಗಳಲ್ಲಿ ಮದುವೆಯ ಆಡಂಬರವೆಂಬುದು ಪರಿಸರಕ್ಕೆ ಹಾನಿಯುಂಟು ಮಾಡುವಂಥದ್ದೇ ಆಗಿದೆ. ಮರುಬಳಕೆಯಾಗದ ಅಲಂಕಾರಿಕ ಸಾಮಗ್ರಿಗಳು, ಪ್ಲಾಸ್ಟಿಕ್ ತಟ್ಟೆಗಳು, ಲೋಟಗಳು, ಉಡುಗೊರೆ ವಸ್ತುಗಳಿಂದ ಪರಿಸರಕ್ಕೆ ಮಾರಕವಾಗುತ್ತಿರುವುದು ತಿಳಿದೂ ಶೋಕಿಯ ಹೆಸರಿನಲ್ಲಿ ಇದೆಲ್ಲವನ್ನೂ ಮುಂದುವರಿಸುತ್ತಿರುವುದು ನಮ್ಮ ಉಡಾಫೆಯೇ ಆಗಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ನಡೆದ ಇಲ್ಲೊಂದು ಮದುವೆ ಪರಿಸರ ರಕ್ಷಿಸುವ ನಿಟ್ಟಿನಲ್ಲಿ ಹರ್ಷಿಸುವ ವಿಚಾರವಾಗಿದೆ.

ಬೆಂಗಳೂರಿನಲ್ಲಿ ಕಳೆದ ತಿಂಗಳು ನಡೆದ ಶ್ರೀವರದ ಮತ್ತು ಗಾಯತ್ರಿ ಎಂಬುವವರ ವಿವಾಹದ ಸಂದರ್ಭದಲ್ಲಿ ವರನ ತಂದೆ ರಾಜಶೇಖರ ಸೋಮಯಾಜಿಯವರ ಆಸಕ್ತಿಯಿಂದ ಬಂದವರಿಗೆಲ್ಲರಿಗೂ ವೃಕ್ಷ ಸಂಕುಲದ ಅಭಿವೃದ್ಧಿಗಾಗಿ ಒಂದೊಂದು ಗಿಡವನ್ನು ಉಡುಗೊರೆ ನೀಡಿದರು. ಆದರೆ ಅದು ಮನೆಗೆ ಹೋಗಿ ನೆಡುವಂಥದಲ್ಲ. ಜಾಗದ ಅಭಾವದಿಂದಲೋ, ಆರೈಕೆಯ ಕೊರತೆಯಿಂದಲೋ ಸಸಿಯ ಬೆಳವಣಿಗೆಗೆ ಲೋಪವಾಗಬಹುದೆಂದು ಬಂದ ಅತಿಥಿಗಳ ಹೆಸರಿನಲ್ಲಿ (ಸುಮಾರು 500 ಜನ) 'ಸಂಕಲ್ಪತರು ಸಂಸ್ಥೆ'ಯ ಸಹಭಾಗಿತ್ವದಲ್ಲಿ ಗಿಡವನ್ನು ನೆಡುವ ಜವಾಬ್ದಾರಿ ತೆಗೆದುಕೊಂಡು ಅದಕ್ಕಾಗುವ ವೆಚ್ಚವನ್ನು ತಾವೇ ಭರಿಸಿದ್ದಾರೆ. ಹಾಗೆ ನೆಟ್ಟ ಗಿಡದ ಫೋಟೊ ಹಾಗೂ ಸರ್ಟಿಫಿಕೇಟನ್ನು ನೋಡುವ ಅವಕಾಶವನ್ನು ಅವರು ಕಲ್ಪಿಸಿದ್ದಾರೆ. ಪರಿಸರದ ಉಳಿವಿನ ಮೊದಲ ಹೆಜ್ಜೆಯಾಗಿ ಆ ಸಸಿಗಳೆಲ್ಲ ಮರವಾಗುವ ಲಕ್ಷಣ ತೋರಿಸುತ್ತಿವೆ. ಮುಂದಿನ ದಿನಗಳಲ್ಲಿ ನಡೆಯುವ ಮದುವೆಗಳು ಇದೇ ಉದಾತ್ತ ಆಲೋಚನೆಯಲ್ಲಿ ನಡೆದರೆ ಫಲವತ್ತಾದ ಭೂಮಿಯನ್ನು ಮಕ್ಕಳಿಗಾಗಿ ಉಳಿಸಬಹುದು. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್‌ನ ಲಿಂಕ್: www.sankalptaru.org

—ಶ್ರೀರಂಜನಿ ಅಡಿಗ, ಬೆಂಗಳೂರು

# ಬಿಳಿಮುಳ್ಳು ಹಣ್ಣು

ಗುಡ್ಡ, ಕಾಡು ಸುತ್ತಾಡುವ ಹುರುಪಿದ್ದರೆ, ನೋಡುವ ಆಸಕ್ತಿಯಿದ್ದರೆ ವರ್ಷದ ಎಲ್ಲ ಋತುಗಳಲ್ಲಿ ಒಂದಿಲ್ಲೊಂದು ಕಾಡುಹಣ್ಣು ನಮ್ಮ ಕಣ್ಣಿಗೆ ಬೀಳದೆ ಇರದು. ಮಳೆಗಾಲದಿಂದ ಹಿಡಿದು ಬೇಸಿಗೆವರೆಗೆ ಕಾಡುಹಣ್ಣುಗಳ ಪರ್ವಕಾಲ. ಚಿತ್ರದಲ್ಲಿ ಕಾಣುವ ಬಿಳಿಮುಳ್ಳು ಹಣ್ಣಿನ ಗಿಡ ಫೆಬ್ರುವರಿ, ಮಾರ್ಚ್ ತಿಂಗಳಲ್ಲಿ ಹೂಬಿಡಲು ಆರಂಭಿಸಿ ಏಪ್ರಿಲ್, ಮೇ ತಿಂಗಳ ತನಕ ಯಥೇಚ್ಛವಾಗಿ ಹಣ್ಣು ಕೊಡುತ್ತದೆ. ಮೈತುಂಬ ದಪ್ಪ ಮುಳ್ಳುಗಳನ್ನು ಹೊದ್ದುಕೊಂಡಿರುವ ಈ ಗಿಡ ಪೊದೆಯಾಕಾರದಲ್ಲಿ ಸಿಕ್ಕುಸಿಕ್ಕಾಗಿ ಹಬ್ಬಿ ಇಪ್ಪತ್ತು ಅಡಿಗಿಂತಲೂ ಹೆಚ್ಚು ಎತ್ತರಕ್ಕೆ ಬೆಳೆಯಬಲ್ಲುದು. ಹಣ್ಣುಕೊಡುವ ಕಾಲಕ್ಕೆ ಈ ಗಿಡ ವಿರಳವಾಗಿ ಎಲೆಗಳನ್ನು ಉಳಿಸಿಕೊಂಡಿರುತ್ತದೆ. ತಿಳಿ ಹಳದಿಬಣ್ಣದ ಈ ಹಣ್ಣು ಮಾಂಸಲಭರಿತವಾಗಿದ್ದು ತಿನ್ನಲು ಬಹಳ ರುಚಿಯಾಗಿರುತ್ತದೆ.



ಸಸ್ಯ ಪ್ರಭೇಧದಲ್ಲಿ ಇದು ರಾಮ್ನೇಶಿಯಾ ಕುಟುಂಬಕ್ಕೆ ಸೇರಿದೆ. ಇದರ ಹಣ್ಣು ಮತ್ತು ಬೀಜವನ್ನು ಉಷ್ಣ ನಿವಾರಣಾ ಔಷಧ ತಯಾರಿಕೆಗೆ ಬಳಸುತ್ತಾರೆ. ಮಾನಸಿಕ ಒತ್ತಡ ನಿವಾರಣೆ ಮತ್ತು ಗಂಟಲು ಕೆರೆತವನ್ನು ಹೋಗಲಾಡಿಸುವ ಔಷಧೀಯ ಗುಣ ಈ ಹಣ್ಣಿಗಿದೆ. ಕರಾವಳಿ ಭಾಗದ ಗುಡ್ಡ, ಕಾಡುಗಳಲ್ಲಿ ಈ ಗಿಡ ಹೆಚ್ಚಾಗಿ ಕಾಣಸಿಗುತ್ತದೆ. ಈ ಸಲ ಊರಿಗೆ ಹೋದಾಗ ಹಣ್ಣನ್ನು ಹೊತ್ತ ಗಿಡ ಕಣ್ಣಿಗೆ ಬಿತ್ತು.

—ಧರ್ಮಾನಂದ ಶಿರ್ವ, ಬೆಂಗಳೂರು





# ಎನ್‌ಸಿಇಆರ್‌ಟಿ ಲಾಂಛನ ರಾಯಚೂರಿನದ್ದು

ಸಾಹಿತ್ಯಿಕ, ಸಾಂಸ್ಕೃತಿಕ, ಭೌಗೋಳಿಕವಾಗಿ ಮತ್ತು ಐತಿಹಾಸಿಕವಾಗಿ ರಾಯಚೂರು ಜಿಲ್ಲೆಯು ರಾಜ್ಯವಲ್ಲದೆ ದೇಶದಲ್ಲೇ ಖ್ಯಾತಿ ಪಡೆದಿದೆ. ಇಲ್ಲಿನ ಮಸ್ಕಿ ತಾಲ್ಲೂಕಿನಲ್ಲಿ ದೊರೆತ ದೇವನಾಂಪ್ರಿಯ ಅಶೋಕನ ಶಾಸನವು ಇತಿಹಾಸದ ಪುಟಗಳಲ್ಲಿ ಮಹತ್ವ ಪಡೆದುಕೊಂಡಿದೆ. ಮಸ್ಕಿಯಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನವು ಎರಡನೇ ಶ್ರೀಶೈಲ ಎಂದು ಖ್ಯಾತಿ ಪಡೆದಿದ್ದು, ಇದೇ ದೇವಾಲಯದ ಗೋಡೆಯ ಮೇಲೆ ಉಬ್ಬುಶಿಲ್ಪದಲ್ಲಿ ಕೆತ್ತಿರುವ ವೃತ್ತಾಕಾರದಲ್ಲಿರುವ ಮೂರು ಮುಖಗಳ ಹಂಸದ ಶಿಲ್ಪಕಲೆಯನ್ನು ಎನ್‌ಸಿಇಆರ್‌ಟಿ ಸಂಸ್ಥೆಯ ಲಾಂಛನವಾಗಿ ಬಳಸಿಕೊಂಡಿದೆ. ನಿರಂತರತೆ ಹಾಗೂ ಜ್ಞಾನದ ಸೂಚಕವಾಗಿರುವ ಈ ಲಾಂಛನವನ್ನು ರಾಷ್ಟ್ರೀಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿಯ ಪ್ರತೀಕವಾಗಿ ಬಳಸಿಕೊಳ್ಳಲಾಗಿದೆ. ಈಶೋಪನಿಷತ್ತಿನಲ್ಲಿ ಈ ಲಾಂಛನದ ಬಗ್ಗೆ ಉಲ್ಲೇಖವಿದ್ದು, 1961ರಲ್ಲಿ ಸ್ಥಾಪನೆಯಾಗಿರುವ ಎನ್‌ಸಿಇಆರ್‌ಟಿ ಲಾಂಛನವನ್ನು ಕೇಂದ್ರ ಸರ್ಕಾರದ ಪುಸ್ತಕಗಳ ಮೇಲೆ ಕಾಣಬಹುದು. ರಾಯಚೂರು ಅನ್ನ, ಚಿನ್ನವನ್ನು ನೀಡುವುದಲ್ಲದೇ ಇಲ್ಲಿನ ಕೋಟೆ ಕೊತ್ತಲೆಗಳು ಇತಿಹಾಸವನ್ನು ಹೇಳುತ್ತವೆ. ನಮ್ಮ ನಾಡು ನಮ್ಮ ಹೆಮ್ಮೆ ಅನ್ನುವಂತೆ ನಮ್ಮ ರಾಯಚೂರು ನಮ್ಮ ಹೆಮ್ಮೆ.

—ಈರಣ್ಣ ಬೆಂಗಾಲಿ, ರಾಯಚೂರು